2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ **102/2018**

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಚಿನ್ನಪ್ಪ | ಪಿಡಬ್ಲ್ಯೂ - 6 |
| ತಂದೆಯ ಹೆಸರು | - | ಗೋವಿಂದಸ್ವಾಮಿ | ಸಿಡಬ್ಲ್ಯೂ - 7 |
| ವಯಸ್ಸು | - | 63 ವರ್ಷ | |
| ಉದ್ಯೋಗ | - | ವ್ಯವಸಾಯ | |
| ವಾಸ ಸ್ಥಳ | - | ದೊಡ್ಡ ಬುಕ್ಕಸಾಗರ, ಕಡೂರು ತಾಃ | |

ದಿನಾಂಕಃ 27-11-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಮಾನ್ಯ ವಿಶೇಷ ಪಿ.ಪಿ. ರವರಿಂದ -

1. ನನ್ನ ಹೆಂಡತಿಯ ಹೆಸರು ಯಶೋದಮ್ಮ, ನನಗೆ ಇಬ್ಬರು ಗಂಡು ಮಕ್ಕಳು. ಮೊದಲನೆಯ ಮಗ ಹೆಸರು ಕುಮಾರ, 2 ನೇ ಮಗನ ಹೆಸರು ಮಂಜುನಾಥ. ಇಬ್ಬರು ಮಕ್ಕಳಿಗೂ ಮದುವೆಯಾಗಿರುತ್ತದೆ. ನನ್ನ ಮೊದಲ ಮಗ ಕುಮಾರನ ಹೆಂಡತಿಯ ಹೆಸರು ಭವ್ಯ, 2 ನೇ ಮಗನ ಹೆಂಡತಿ ಹೆಸರು ದೀಪಾ. ನಾನು ನನ್ನ ಹೆಂಡತಿ ಮತ್ತು ಮಕ್ಕಳೊಂದಿಗೆ ಒಟ್ಟು ಕುಟುಂಬವಾಗಿ ನಮ್ಮ ಊರಾದ ದೊಡ್ಡ ಬುಕ್ಕಸಾಗರದಲ್ಲಿ ವಾಸವಾಗಿರುತ್ತೇವೆ. ನನ್ನ 2 ನೇ ಮಗ ಮಂಜುನಾಥ ಈಗ ಇರುವುದಿಲ್ಲ.

2. ದಿಃ 28.04.2018 ರಂದು ನಾನು ಮನೆಗೆ ಬಂದಾಗ ರಾತ್ರಿ 8.30 ಗಂಟೆಯಾಗಿತ್ತು. ಮನೆಯಲ್ಲಿ ನನ್ನ ಸೊಸೆ ದೀಪಾ ಇದ್ದಳು. ನನ್ನ ಮಗ ಮಂಜುನಾಥ ಕಾಣಿಸಲಿಲ್ಲವಾದ್ದರಿಂದ ನನ್ನ ಸೊಸೆ

ದೀಪಾಳನ್ನು ಮಂಜುನಾಥ ಎಲ್ಲಿ ಎಂದು ಕೇಳಿರುತ್ತೇನೆ. ಆಗ ನನ್ನ ಸೊಸೆ, ತನ್ನ ಗಂಡ ಮಂಜುನಾಥನಿಗೆ ಒಂದು ಫೋನ್ ಕರೆ ಬಂದಿತ್ತು, ಆತ ನನಗೆ ಬೊಂಡಾ ಮಾಡಲು ಹೇಳಿ ಹೊರಗೆ ಬೈಕ್ ತೆಗೆದುಕೊಂಡು ಹೋಗಿರುತ್ತಾನೆ ಎಂದು ನನಗೆ ಹೇಳಿರುತ್ತಾಳೆ. ಆ ದಿನ ರಾತ್ರಿ ನಾವು ಸುಮಾರು 10.00 ಗಂಟೆ ವರೆಗೆ ನನ್ನ ಮಗ ಮಂಜುನಾಥನಿಗಾಗಿ ಕಾಯ್ದಿದ್ದು, ನನ್ನ ಮಗ ಮನೆಗೆ ಬಂದಿರುವುದಿಲ್ಲ. ಆಗ ನಾನು ನನ್ನ ದೊಡ್ಡ ಮಗನಾದ ಕುಮಾರನಿಗೆ ಫೋನ್ ಮಾಡಿ ಮಂಜುನಾಥ ಏನಾದರು ಕಡೂರಿಗೆ ಬಂದಿದ್ದಾನಾ ನೋಡು ಎಂದು ಹೇಳಿರುತ್ತೇನೆ. ಆಗ ನನ್ನ ಮಗ ಕುಮಾರ ರಾತ್ರಿ 10.30 ಗಂಟೆಗೆ ಮನೆಗೆ ಬಂದಿರುತ್ತಾನೆ. ಆಗ ನಾವು ನಮ್ಮ ಅಕ್ಕ ಪಕ್ಕದ ಮನೆಯವರನೆಲ್ಲ ನನ್ನ ಮಗ ಮಂಜುನಾಥನ ಬಗ್ಗೆ ವಿಚಾರಿಸಿರುತ್ತೇವೆ. ನಂತರ ಮಾರನೇ ದಿನ ನಮ್ಮ ನೆಂಟರಿಷ್ಟರಿಗೆಲ್ಲ ಫೋನ್ ಮಾಡಿ ಮಂಜುನಾಥನ ಬಗ್ಗೆ ತಿಳಿಸಿರುತ್ತೇವೆ. ಮಾರನೇ ದಿನವು ಸಹ ನನ್ನ ಮಗ ಮಂಜುನಾಥನ ಬಗ್ಗೆ ಸುಳಿವು ಸಿಕ್ಕಿರುವುದಿಲ್ಲ.

3. ದಿಃ 30.04.2018 ರಂದು ಬೆಳಿಗ್ಗೆ 10.30 ಗಂಟೆಗೆ ನಾವು ಕಡೂರು ಪೊಲೀಸ್ ಠಾಣೆಗೆ ಹೋಗಿ ನನ್ನ ಮಗ ಮಂಜುನಾಥ ಕಾಣೆಯಾಗಿರುವ ಬಗ್ಗೆ ದೂರು ನೀಡಿ, ನನ್ನ ಮಗನ ಒಂದು ಭಾವ ಚಿತ್ರವನ್ನು ಸಹ ಪೊಲೀಸರಿಗೆ ನೀಡಿರುತ್ತೇವೆ ನಾನು ಆ ದಿನ ಠಾಣೆಯಲ್ಲಿ ಕೊಟ್ಟ ದೂರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಈಗ ತನ್ನ ಮಗ ಕಾಣೇಯಾದ ಬಗ್ಗೆ

ನೀಡಿದ ದೂರನ್ನು ನೋಡಿ ಗುರುತಿಸಿದ್ದು, ಅದು ನಕಲು ಪ್ರತಿ ಮತ್ತು ದೃಢೀಕೃತ ಪ್ರತಿಯಾಗಿದ್ದು, ಅದನ್ನು ಆರೋಪಿ ಪರ ವಕೀಲರ ತಕರಾರಿನ ಮೇರೆಗೆ ನಿ.ಪಿ.10 ಎಂದು ಗುರುತಿಸಲಾಯಿತು.

4. ನಾನು ದೂರು ಕೊಟ್ಟ ನಂತರ ದಿನಾಂಕಃ 13.05.2018 ರಂದು ರಾತ್ರಿ 11-11.30 ಗಂಟೆಯ ಅವಧಿಯಲ್ಲಿ ಕಡೂರು ಪೊಲೀಸರು ನಮ್ಮ ಮನೆಗೆ ಬಂದಿದ್ದು, ಅವರು ನಮಗೆ ಮಾರನೇ ದಿನ ಬೆಳಿಗ್ಗೆ 6.00 ಗಂಟೆಗೆ ನನ್ನ ಮಗ ಮಂಜುನಾಥನ ಬಗ್ಗೆ ಮಾತನಾಡುವ ಕುರಿತಂತೆ ಕಡೂರು ಠಾಣೆಗೆ ಬರಲು ಹೇಳಿ ಹೋಗಿರುತ್ತಾರೆ. ಅದರಂತೆ ನಾನು, ನನ್ನ ಮಗ ಮಾರನೇ ದಿನ ಅಂದರೆ ದಿಃ 14.05.2018 ರಂದು ಬೆಳಿಗ್ಗೆ 6 ರಿಂದ 6.15 ಗಂಟೆಗೆ ಕಡೂರು ಪೊಲೀಸ್ ಠಾಣೆಗೆ ಹೋಗಿರುತ್ತೇವೆ. ಆಗ ನಾವು ಠಾಣೆಗೆ ಹೋಗಿ ನೋಡಿದಾಗ ಠಾಣೆಯಲ್ಲಿ 1 ನೇ ಆರೋಪಿ ಪ್ರದೀಪನು ಇದ್ದನು. ಆಗ ಪೊಲೀಸರು ನಮಗೆ, 1 ನೇ ಆರೋಪಿ ಪ್ರದೀಪನು ತನ್ನ ಹೆಂಡತಿಗೆ ನನ್ನ ಮಗ ಮಂಜುನಾಥನು ಕಿರುಕುಳ ಕೊಡುತ್ತಿದ್ದನು ಎಂಬ ವಿಷಯಕ್ಕೆ ಆತನನ್ನು ಕೊಲೆ ಮಾಡಿ ಸುಟ್ಟುಹಾಕಿದ ಬಗ್ಗೆ ಹೇಳಿರುತ್ತಾನೆ ಎಂದು ಪೊಲೀಸರು ನಮಗೆ ತಿಳಿಸಿದರು. ನಾವು ಠಾಣೆಗೆ ಹೋದ ಸ್ವಲ್ಪ ಹೊತ್ತಿನಲ್ಲಿ ಫ್ರಾಸಾ.3 ಲೋಕೇಶ ಮತ್ತು ಫ್ರಾಸಾ.4 ನಾಗರಾಜ ಸಹ ಠಾಣೆಗೆ ಬಂದಿರುತ್ತಾರೆ. ನಂತರ ಪೊಲೀಸರು ಮತ್ತು 1 ನೇ ಆರೋಪಿ

ಪ್ರದೀಪ ಒಂದು ಪೊಲೀಸ್ ವಾಹನದಲ್ಲಿ ಹೋಗಿದ್ದು, ನಮಗೆ ವಾಹನದ ಹಿಂದೆ ಬರಲು ಹೇಳಿದ್ದು, ಅದರಂತೆ ನಾವು ಬೈಕ್ ನಲ್ಲಿ ಹಿಂಬಾಲಿಸಿರುತ್ತೇವೆ. ಸದರಿ ಫ್ರಾಸಾ.3 ಮತ್ತು 4 ಇವರು ಸಹ ಪೊಲೀಸರೊಂದಿಗೆ ಜೀಪಿನಲ್ಲಿಯೇ ಹೋಗಿರುತ್ತಾರೆ. ಸದರಿ ಪೊಲೀಸರು ಮತ್ತು ಆರೋಪಿ ಮತ್ತು ಫ್ರಾಸಾ.3 ಮತ್ತು 4 ಇರುವ ಜೀಪು ಕಡೂರಿನಿಂದ ಚಿಕ್ಕಮಗಳೂರಿಗೆ ಬರುವ ರಸ್ತೆಯಲ್ಲಿ ಬಂದು ಜೋಗಿ ಕಣಿವೆ ಆಂಜನೇಯಸ್ವಾಮಿ ದೇವಸ್ಥಾನದ ಪಕ್ಕದ ಬಲಗಡೆ ಪ್ಲಾಂಟೇಷನ್ ಕಚ್ಚಾ ರಸ್ತೆಯಲ್ಲಿ ಹೋಗಿದ್ದು, ಹಾಗೆ ಸದರಿ ರಸ್ತೆಯಲ್ಲಿ ಸುಮಾರು ಒಂದು ವರೆ ಕಿ.ಮೀ ಹೋಗಿದ್ದು, ಅದನ್ನು ನಾವು ಹಿಂದಿನಿಂದ ಹಿಂಬಾಲಿಸಿಕೊಂಡಿರುತ್ತೇವೆ. ನಂತರ ಜೀಪು ಒಂದು ವರೆ ಕಿ.ಮೀ ಹೋದ ನಂತರ ನಿಲ್ಲಿಸಿದ್ದು, ನಾವು ಸಹ ನಮ್ಮ ಬೈಕ್ ನ್ನು ನಿಲ್ಲಿಸಿರುತ್ತೇವೆ. ನಂತರ ಆರೋಪಿ ಪ್ರದೀಪನು ಪೊಲೀಸರನ್ನು ಮತ್ತು ಫ್ರಾಸಾ.3 ಮತ್ತು 4 ಇವರನ್ನು ಜೀಪು ನಿಂತ ಜಾಗದಿಂದ ಸುಮಾರು 150 ರಿಂದ 200 ಅಡಿ ದೂರದಲ್ಲಿ ಕರೆದುಕೊಂಡು ಹೋಗಿ ಒಂದು ಸ್ಥಳ ತೋರಿಸಿ ತನ್ನ ಕೈಯನ್ನು ತೋರಿಸುತ್ತಿದ್ದನು. ನಂತರ ಪೊಲೀಸರು ತಾವು ಇದ್ದ ಸ್ಥಳಕ್ಕೆ ನನ್ನನ್ನು ಮತ್ತು ನನ್ನ ಮಗ ಕುಮಾರ್ ನನ್ನು ಕರೆದಿರುತ್ತಾರೆ. ಆಗ ನಾನು ಮತ್ತು ಕುಮಾರ, ಪೊಲೀಸರು ಮತ್ತು ಆರೋಪಿ ಇದ್ದ ಸ್ಥಳಕ್ಕೆ ಹೋಗಿದ್ದು, ಆಗ ಸ್ಥಳದಲ್ಲಿ ಇದ್ದ ಒಂದು ಸುಟ್ಟಿರುವ ಶವವನ್ನು ನೋಡಿರುತ್ತೇನೆ. ಆಗ ಸದರಿ ಶವವನ್ನು ನೋಡಿ ಅದು ನನ್ನ

ಮಗ ಮಂಜುನಾಥನದೇ ಶವ ಎಂದು ಗುರುತಿಸಿರುತ್ತೇನೆ. ಸದರಿ ಶವವು ಅರ್ಧಂಬರ್ಧ ಸುಟ್ಟಿತ್ತು. ಸದರಿ ಶವದ ಕೈಯಲ್ಲಿ ಇದ್ದ ಬೆಳ್ಳಿ ಕಡಗವನ್ನು ಮತ್ತು ಶವದ ಹಲ್ಲುಗಳನ್ನು ನೋಡಿ ಅದು ನನ್ನ ಮಗ ಮಂಜುನಾಥನದ್ದೇ ಶವ ಎಂದು ಗುರುತಿಸಿರುತ್ತೇನೆ. ನಂತರ ಪೊಲೀಸರು ಸ್ಥಳದಲ್ಲಿ ಮಹಜರ್ ಮಾಡಿರುತ್ತಾರೆ. ನಂತರ ಸದರಿ ಮಹಜರ್ ಕಾಲಕ್ಕೆ ನನ್ನಿಂದ ಹೇಳಿಕೆ ಪಡೆದಿರುತ್ತಾರೆ. ಸದರಿ ಹೇಳಿಕೆಯಲ್ಲಿ ನಾನು ನನ್ನ ಮಗ ಮಂಜುನಾಥ ಮತ್ತು ಆರೋಪಿ ಪ್ರದೀಪ ಒಂದೇ ಬೈಕ್ ನಲ್ಲಿ ದಿಃ 28.04.2018 ರಂದು ಸಂಜೆ 7.30 ಗಂಟೆಯ ನಂತರ ಹೋಗಿರುವುದನ್ನು ಶಿವಾನಂದ ಎಂಬುವವರು ನೋಡಿರುವ ವಿಚಾರವಾಗಿ ಸದರಿ ಸ್ಥಳದಲ್ಲಿ ಮಾತನಾಡುತ್ತಿದ್ದರು. ಸದರಿ ಮೇಲ್ಕಂಡ ವಿಚಾರವನ್ನು ನಾನು ನನ್ನ ಹೇಳಿಕೆಯಲ್ಲಿ ಹೇಳಿರುತ್ತೇನೆ.

5. ನನ್ನ ಮಗನ ಶವ ಬಿದ್ದ ಸ್ಥಳದಲ್ಲಿ ನಮ್ಮ ಊರಿನ ಜನರು ಸೇರಿದಂತೆ ಸುಮಾರು 50 ಕ್ಕಿಂತ ಹೆಚ್ಚು ಜನ ಇದ್ದೆವು. ಮಹಜರ್ ಮುಗಿದ ನಂತರ ನನ್ನ ಮಗನ ಶವವನ್ನು ತೆಗೆದುಕೊಂಡು ಬಂದು ನಮ್ಮ ಸಂಪ್ರದಾಯದಂತೆ ಅಂತ್ಯಕ್ರಿಯೆ ಮಾಡಿರುತ್ತೇವೆ.

6. ದಿಃ 22.06.2018 ರಂದು ಕಡೂರು ಪೊಲೀಸ್ ಠಾಣೆಯಿಂದ ನನಗೆ ಒಂದು ನೋಟೀಸು ಬಂದಿರುತ್ತದೆ. ಅದರಲ್ಲಿ ನನಗೆ ಡಿ.ಎನ್.ಎ. ಪರೀಕ್ಷೆಗಾಗಿ ಬರುವಂತೆ ಹೇಳಿದ್ದರು, ಅದರಂತೆ ನೋಟೀಸು ಬಂದ 4 ದಿನದ ನಂತರ ನಾನು, ನನ್ನ ಹೆಂಡತಿ

ಮತ್ತು ನನ್ನ ಮಗ ಕುಮರ್ ಕಡೂರು ವೃತ್ತ ನಿರೀಕ್ಷಕರ ಕಚೇರಿಗೆ ಹೋಗಿರುತ್ತೇವೆ. ಅಲ್ಲಿಂದ ನಮ್ಮನ್ನು ಕಡೂರು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಅಲ್ಲಿ ವೈದ್ಯರು ನನಗೆ ಮತ್ತು ನನ್ನ ಹೆಂಡತಿಗೆ ನಮ್ಮ ರಕ್ತವನ್ನು ಕೊಡಲು ಒಪ್ಪಿಗೆ ಇದೆಯಾ ಎಂದು ಕೇಳಿದ್ದು, ಅದರಂತೆ ನಾವು ನಮಗೆ ಒಪ್ಪಿಗೆ ಇದೆ ಎಂದು ಹೇಳಿ ನಮ್ಮ ರಕ್ತವನ್ನು ನೀಡಿರುತ್ತೇವೆ. ನನಗೆ ಆ ದಿನ ಪೊಲೀಸರು ಠಾಣೆಗೆ ಬರಬೇಕೆಂದು ನೋಟೀಸು ನೀಡಿದ್ದು, ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.11 ಎಂದು ಗುರುತಿಸಲಾಯಿತು ಮತ್ತು ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿ.ಪಿ.11(ಎ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿ ಮತ್ತು ಆತನ ಹೆಂಡತಿ ಮಾದರಿ ರಕ್ತ ಕೋರಿರುವ ಬಗ್ಗೆ ಇರುವ ದಾಖಲಾತಿಗಳು ದೃಢೀಕೃತ ನಕಲು ಪ್ರತಿಗಳು ಆಗಿರುವುದರಿಂದ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರು ಮುಂದು ವರೆದ ಮುಖ್ಯ ವಿಚಾರಣೆಗೆ ಸಮಯವಕಾಶ ಕೇಳಿದ್ದು, ಅದರಂತೆ ಮುಂದು ವರೆದ ಮುಖ್ಯ ವಿಚಾರಣೆಗೆ ಸಮಯ ನೀಡಲಾಯಿತು.)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

Sd/-

(ಮಂಜುನಾಥ ಸಂಗ್ರೇಶಿ)

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಚಿಕ್ಕಮಗಳೂರು.

ಮಾಃ

ದಿನಾಂಕಃ 24-12-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ ಮಾನ್ಯ ವಿಶೇಷ ಪಿ.ಪಿ. ರವರಿಂದ -

7. .

ಪಾಟೀ ಸವಾಲು ಶ್ರೀ ಸಿ.ಎನ್.ವಿ. ವಕೀಲರಿಂದ – ಆರೋಪಿತರ ಪರವಾಗಿ

8. .

ಮರುವಿಚಾರಣೆ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

(ಮಂಜುನಾಥ ಸಂಗ್ರೇಶಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಮಾ.